# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ದಿನಾಂಕ: 02-01-2021 ರಂದು ಸಮಯ 10.30 ಗಂಟೆಗೆ ವಾರ್ಡ್ ಸಂಖ್ಯೆ: 155 ಹನುಮಂತನಗರಕ್ಕೆ ಸಂಬಂಧಪಟ್ಟಂತೆ ಹರಿಹರಗುಡ್ಡ ಉದ್ಯಾನವನ (ತಿಮ್ಮೇಶಪ್ರಭು ಉದ್ಯಾನವನ)ದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.**

1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ–ಮಹದೇವಪುರ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ ಗಿರೀಶ ವಿ. ಕುಡಾಳಕರ, ಸಹಾಯಕ ಅಭಿಯಂತರರು ವಾರ್ಡ್ ನಂ.–155 – ಸದಸ್ಯ ಕಾರ್ಯದರ್ಶಿ
3. ಶ್ರೀ. ನಟರಾಜ್ (ಹಿ.ಆ.ಪ.) – ಸದಸ್ಯರು
4. ಶ್ರೀ ದಿವಾಕರ್ (ಕಂ.ಪ.)– ಸದಸ್ಯರು
5. ಶ್ರೀ ಜ್ಯೋತಿ ವಿ.(ಟೆ.ಇ.)– ಸದಸ್ಯರು
6. ಶ್ರೀ ಮಕ್ಸೂದ್ ಖಾನ್( ತೋಟಗಾರಿಕೆ)
7. ಶ್ರೀ ಎನ್.ರಾಮಚಂದ್ರ (ಜೆ.ಇ.) ಬೆಂ.ವಿ.ಕಂ. ಹನುಮಂತನಗರ.
8. ಶ್ರೀ ಚಂದ್ರಶೇಖರ್– ಸಾರ್ವಜನಿಕರು.
9. ಶ್ರೀ. ಪಿಳ್ಳಪ್ಪ – ಸಾರ್ವಜನಿಕರು.
10. ಶ್ರೀ ಸಿ. ಉಮೇಶ್ – ಸಾರ್ವಜನಿಕರು.
11. ಶ್ರೀಮತಿ ದೇವಕಿ– ಸಾರ್ವಜನಿಕರು.
12. ಶ್ರೀ ಉದಯ– ಸಾರ್ವಜನಿಕರು.
13. ಶ್ರೀ ಶಿವಲಿಂಗೇಗೌಡ – ಸಾರ್ವಜನಿಕರು.
14. ಶ್ರೀ ಅಶೋಕ್ ಜಿ. – ಸಾರ್ವಜನಿಕರು
15. ಶ್ರೀ ಎಲ್.ಕುಮಾರ್ – ಸಾರ್ವಜನಿಕರು
16. ಶ್ರೀ ವಿಜಯ್– ಸಾರ್ವಜನಿಕರು.

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.155ರ **ನೋಡಲ್** ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳು.**

ಹನುಮಂತನಗರ ಶ್ರೀ ಗವಿಗಂಗಾಧರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಸುಮಾರು ಹಳೇ ಗಾಡಿಗಳು [illegible]ದ್ದು ಸುಮಾರು ದಿನಗಳಿಂದ ನಿಂತಿರುವ ಗಾಡಿಗಳ ನಂಬರ್‌ಗಳನ್ನು ನಮೂದಿಸಿ ಮಾಲಿಕರ ವಿರುದ್ಧ ಕ್ರಮಕ್ಕಾಗಿ [illegible]ರಿ ಪೋಲಿಸ್ ಠಾಣೆಗೆ ಪತ್ರವನ್ನು ಬರೆಯಲು ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು ಸೂಚಿಸಿದರು.

ಮು.ತಿ.ನೋ

ಲಕ್ಷ್ಮೀಪುರ 4ನೇ ಕ್ರಾಸ್ ರಸ್ತೆಯು ತುಂಬಾ ಹಾಳಾಗಿದ್ದು ಸದರಿ ರಸ್ತೆಯನ್ನು ಸರಿಪಡಿಸಲು ಶ್ರೀ ಎಲ್.ಕುಮಾರ್‌ರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಗವಿಗಂಗಾಧರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಫುಟ್ ಪಾತ್ ಮಾಡಲು ಕ್ರಮಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಶ್ರೀ.ಚಂದ್ರುರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

ಗವಿಗಂಗಾಧರೇಶ್ವರ ದೇವಸ್ಥಾನದ ಹತ್ತಿರವಿರುವ ಸರ್ಕಾರಿ ಗ್ರಂಥಾಲಯದ ಮೇಲೆ ಸ್ವಚ್ಛಗೊಳಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ.ಸಿ.ಉಮೇಶ್‌ರವರು ಕೋರಿದರು.

ಸದರಿ ವಿಷಯದ ಕುರಿತು ಸ್ಥಳ ಪರಿವೀಕ್ಷಣೆ/ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**ಬೀದಿ ದೀಪ ನಿರ್ವಹಣೆ ಕುರಿತು**

ಹನುಮಂತನಗರ ಕಾವೇರಿ ನದಿ ರಸ್ತೆಯಲ್ಲಿ ಕೆಲವು ಕಡೆ ಬೀದಿ ದೀಪ ಉರಿಯುತ್ತಿಲ್ಲವೆಂದು ಶ್ರೀ.ಉದಯ ರವರು ತಿಳಿಸಿದರು.

ಸದರಿ ಕಂಬ/ಬೀದಿ ದೀಪವನ್ನು ಸರಿಪಡಿಸಲು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ.ರವರಿಗೆ ಸೂಚಿಸಲಾಗುವುದು ಎಂದು ಸಹಾಯಕ ಅಭಿಯಂತರರು ಹನುಮಂತನಗರ ರವರು ತಿಳಿಸಿದರು.

**COVID-19 ಕಾಯಿಲೆ ಕುರಿತು**

**COVID-19** ಕಾಯಿಲೆ ಕುರಿತು ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್‌ನ ನಾಗರೀಕರಿಗೆ ಉಚಿತ Mobile Team ರಚಿಸಿದ್ದು ಸದರಿ ತಂಡದ ಮುಖಾಂತರ ವಾರ್ಡ್‌ನಲ್ಲಿ Camp ಮಾಡಿ ಧ್ವನಿವರ್ಧಕ ಹಾಗೂ ಬ್ಯಾನರ್ಸ್ ಮೂಲಕ ತಪಾಸಣೆ ಮಾಡಿಸಿಕೊಳ್ಳಲು ಅರಿವು ಮೂಡಿಸಲು ಕ್ರಮಕೈಗೊಳ್ಳಲು ಹಾಗೂ ಕಟ್ಟಡ ಕಾಮಗಾರಿ ನಡೆಯುತ್ತಿದ್ದಲ್ಲಿ/ ಕಮರ್ಶಿಯಲ್ ಭಾಗಗಳಲ್ಲಿ ತಪಾಸಣೆ ಕೈಗೊಳ್ಳಲು ಸೆಕ್ಟರ್ ಅಧಿಕಾರಿಯವರಿಗೆ ಸೂಚಿಸಲಾಯಿತು.

COVID +V Case ಕಂಡು ಬಂದ ಹಿನ್ನಲೆಯಲ್ಲಿ ರೋಗಿಯ ಮನೆಯ ಹತ್ತಿರ ತಕ್ಷಣ ಸಮರ್ಪಕವಾಗಿ Sanitization ಮಾಡಲು ಸಹಾಯಕ ಅಭಿಯಂತರರು ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ವ್ಯವಸ್ಥೆ ಕಲ್ಪಿಸಲು ಸಭೆಯಲ್ಲಿ ಸೂಚಿಸಲಾಯಿತು.

**ಆರೋಗ್ಯ ಇಲಾಖೆ**

ಹನುಮಂತನಗರ ಎ.ಕೆ ಕಾಲೋನಿ ಉದ್ಯಾನವನದ ಒಳಗೆ ತುಂಬಾ ಗಿಡಗಳು ಬೆಳೆದಿದ್ದು ಕ್ಲೀನಿಂಗ್ ಮಾಡಿಕೊಡಲು ಸಭೆಯಲ್ಲಿ ಹಾಜರಿದ್ದ ಶ್ರೀ. ಚಂದ್ರುರವರು ಕೋರಿದರು.

ಮು.ತಿ.ನೋ

Scanned with CamScanner

ಹನುಮಂತನಗರ ಎ.ಕೆ ಕಾಲೋನಿ ಉದ್ಯಾನವನದ ಸ್ಥಳವನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಪರಿವೀಕ್ಷಕರು ಹನುಮಂತನಗರ ರವರು ತಿಳಿಸಿದರು.

**ಕಂದಾಯ ಇಲಾಖೆ:**

ಹನುಮಂತನಗರ ವಾರ್ಡ್‌ನಲ್ಲಿ ಬಿ.ಬಿ.ಎಂ.ಪಿ.ಯ ಹಿತದೃಷ್ಟಿಯಿಂದ ನಿಗಧಿತ ಸಮಯದಲ್ಲಿ ಕಂದಾಯ ವಸೂಲಿಮಾಡಲು ಕ್ರಮಕೈಗೊಳ್ಳಲು ಹಾಜರಿದ್ದ ಕಂದಾಯ ಅಧಿಕಾರಿಯವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

ವಾರ್ಡ್ ಕಮಿಟಿ ಸಭೆಯಲ್ಲಿ ಉಪಸ್ಥಿತರಿರುವ ಅಧಿಕಾರಿ ವರ್ಗದವರಿಗೆ, ವಾರ್ಡ್ ಕಮಿಟಿ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಶನಿವಾರದಂದು ವಾರ್ಡ್ ಕಮಿಟಿ ಸಭೆಯನ್ನು ಏರ್ಪಡಿಸಲಾಗುವುದು ಎಂದು ತಿಳಿಸುತ್ತಾ ವಂದನಾರ್ಪಣೆ ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ 2/1/2021
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-155 ಹನುಮಂತನಗರ

02.01.2021
ಅಧ್ಯಕ್ಷರು ವಾರ್ಡ್ ಸಮಿತಿ
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-155 ಹನುಮಂತನಗರ

ಪ್ರತಿಯನ್ನು,

1. ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮಾಹಿತಿಗಾಗಿ.
2. ಕೌನ್ಸಿಲ್ ಕಾರ್ಯದರ್ಶಿ ರವರಿಗೆ ಮಾಹಿತಿಗಾಗಿ.
3. ಮುಖ್ಯ ಅಭಿಯಂತರರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
4. ಉಪ ಆಯುಕ್ತರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
5. ಅಧೀಕ್ಷಕ ಅಭಿಯಂತರರು(ದಕ್ಷಿಣ) ರವರಿಗೆ ಮಾಹಿತಿಗಾಗಿ.
6. ಕಾರ್ಯಪಾಲಕ ಅಭಿಯಂತರರು ರವರಿಗೆ ಮಾಹಿತಿಗಾಗಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ಉಪವಿಭಾಗ, ಬಿ.ಬಿ.ಎಂ.ಪಿ ರವರಿಗೆ ಮಾಹಿತಿಗಾಗಿ.
8. ಕಛೇರಿ ಕಡತಕ್ಕೆ.

Scanned with CamScanner